**ಕರ್ನಾಟಕ ಸರ್ಕಾರ**

ಸಂಖ್ಯೆ: ಇಡಿ 225 ಟಿಪಿಇ 2014

ಕರ್ನಾಟಕ ಸರ್ಕಾರ ಸಚಿವಾಲಯ,
ಬಹುಮಹಡಿಗಳ ಕಟ್ಟಡ, 6ನೇ ಮಹಡಿ,
ಬೆಂಗಳೂರು, ದಿನಾಂಕ: 01-09-2014.

ಇವರಿಂದ,

ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ),
ಬೆಂಗಳೂರು - 560 001.

ಇವರಿಗೆ,

ನಿರ್ದೇಶಕರು,
ತಾಂತ್ರಿಕ ಶಿಕ್ಷಣ ಇಲಾಖೆ,
ಅರಮನೆ ರಸ್ತೆ,
ಬೆಂಗಳೂರು-560 001.

ಮಾನ್ಯರೇ,

ವಿಷಯ: ಗುಡ್ಡದ ಚನ್ನಾಪುರದಲ್ಲಿ ಪ್ರಾರಂಭವಾಗುತ್ತಿರುವ ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜು, ಬಂಕಾಪುರ-ಇದನ್ನು 'ಶ್ರೀ.ಚನ್ನಕೇಶವ ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜು, ಗುಡ್ಡದ ಚನ್ನಾಪುರ' ಎಂದು ಮರುನಾಮಕರಣ ಮಾಡುವ ಹಾಗೂ ಈ ಕಾಲೇಜಿನಲ್ಲಿ ಡಿ ದರ್ಜೆ ಹುದ್ದೆಗಳಿಗೆ ಸ್ಥಳೀಯರನ್ನು ನೇಮಿಸಿಕೊಳ್ಳುವ ಮತ್ತು ಕಮಿಟಿ ರಚನೆಯಲ್ಲಿ ಗುಡ್ಡದ ಚನ್ನಾಪುರದ ಸ್ಥಳೀಯರಿಗೆ ಸದಸ್ಯರಾಗಲು ಆದ್ಯತೆ ನೀಡುವ ಕುರಿತು.

ಉಲ್ಲೇಖ: ತಮ್ಮ ಪತ್ರಸಂಖ್ಯೆ: ಡಿಟಿಇ/13/ಬಿಎಲ್‌ಡಿ/2013, ದಿನಾಂಕ: 25/07/2014.

(((O)))

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ತಮ್ಮ ಪತ್ರದಲ್ಲಿನ ಪ್ರಸ್ತಾವನೆಯನ್ನು ಪರಿಶೀಲಿಸಿ ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜು, ಬಂಕಾಪುರ-ಇದನ್ನು 'ಶ್ರೀ.ಚನ್ನಕೇಶವ ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜು, ಗುಡ್ಡದ ಚನ್ನಾಪುರ' ಎಂದು ನಾಮಕರಣ ಮಾಡಲು ಸರ್ಕಾರದ ಅನುಮೋದನೆ ನೀಡಲಾಗಿದೆ. ಮುಂದುವರೆದು ಸದರಿ ಕಾಲೇಜಿನ 'ಡಿ-ದರ್ಜೆ' ಹುದ್ದೆಗಳಿಗೆ ಸರ್ಕಾರಿ ನಿಯಮಗಳನುಸಾರ ಸ್ಥಳೀಯರನ್ನೇ ನೇಮಕ ಮಾಡಿಕೊಳ್ಳಲು ಅವಕಾಶವಿಲ್ಲದಿರುವುದರಿಂದ ಈ ಹುದ್ದೆಗಳಿಗೆ ಸರ್ಕಾರದ ನೇಮಕಾತಿ ನಿಯಮಗಳನುಸಾರ ನೇಮಕಾತಿ ಮಾಡಿಕೊಳ್ಳಬೇಕಾಗಿರುತ್ತದೆಂದು ಮತ್ತು ಸರ್ಕಾರಿ ಪಾಲಿಟೆಕ್ನಿಕ್‌ಗಳಲ್ಲಿ ಪ್ರಸ್ತುತದಲ್ಲಿ ಆಡಳಿತ ಸಮಿತಿಯನ್ನು ರಚನೆ ಮಾಡಿಲ್ಲದಿರುವುದರಿಂದ ಸದರಿ ಸಮಿತಿಗೆ ಸ್ಥಳೀಯರನ್ನು ಸದಸ್ಯರಾಗಿ ನೇಮಕ ಮಾಡುವ ಪ್ರಶ್ನೆಯು ಉದ್ಭವಿಸುವುದಿಲ್ಲ ಎಂಬ ಅಂಶವನ್ನು ಶಿಗ್ಗಾಂವ್ ಕ್ಷೇತ್ರದ ಮಾನ್ಯ ವಿಧಾನಸಭಾ ಸದಸ್ಯರಾದ ಶ್ರೀ.ಬಸವರಾಜ ಬೊಮ್ಮಾಯಿರವರಿಗೆ ತಿಳಿಸುವಂತೆ ತಮ್ಮನ್ನು ಕೋರಲು ನಿರ್ದೇಶಿತನಾಗಿದ್ದೇನೆ.

ತಮ್ಮ ನಂಬುಗೆಯ,

(ಬಿ.ನಾಗಭೂಷಣ),
ಸರ್ಕಾರದ ಅಧೀನ ಕಾರ್ಯದರ್ಶಿ,
ಶಿಕ್ಷಣ ಇಲಾಖೆ (ತಾಂತ್ರಿಕ ಶಿಕ್ಷಣ).

ಕರ್ನಾಟಕ ಸರ್ಕಾರ

ಸಂಖ್ಯೆ: ಡಿಟಿಇ 13 ಬಿಎಲ್‌ಡಿ 2011 / 2088
ಅಡಕ:

ನಿರ್ದೇಶಕರವರ ಕಛೇರಿ,
ತಾಂತ್ರಿಕ ಶಿಕ್ಷಣ ಇಲಾಖೆ,
ಬೆಂಗಳೂರು-560 001,
ದಿನಾಂಕ:10-09-2014.

ಇವರಿಗೆ,

ಪ್ರಿನ್ಸಿಪಾಲರು,
ಸರ್ಕಾರಿ ಪಾಲಿಟೆಕ್ನಿಕ್,
ಬಂಕಾಪುರ

ಮಾನ್ಯರೆ,

ವಿಷಯ: ಗುಡ್ಡದ ಚನ್ನಾಪುರದಲ್ಲಿ ಪ್ರಾರಂಭವಾಗುತ್ತಿರುವ ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜು ಬಂಕಾಪುರ ಇದನ್ನು ಶ್ರೀ ಚೆನ್ನಕೇಶವ ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜು ಗುಡ್ಡದ ಚನ್ನಾಪುರ ಎಂದು ನಾಮಕರಣ ಮಾಡುವ ಹಾಗೂ ಈ ಕಾಲೇಜಿನಲ್ಲಿ ಡಿ ದರ್ಜೆ ಹುದ್ದೆಗಳಿಗೆ ಸ್ಥಳಿಯರನ್ನು ನೇಮಿಸಿಕೊಳ್ಳುವ ಮತ್ತು ಕಮೀಟಿ ರಚನೆಯಲ್ಲಿ ಗುಡ್ಡದ ಚನ್ನಾಪುರದ ಸ್ಥಳಿಯರಿಗೆ ಸದಸ್ಯರಾಗಲು ಆದ್ಯತೆ ನೀಡುವ ಕುರಿತು.

ಉಲ್ಲೇಖ: ಸರ್ಕಾರದ ಪತ್ರ ಸಂಖ್ಯೆ: ಇಡಿ 225 ಟಿಪಿಇ 2014 ದಿನಾಂಕ: 01-09-2014 (ಪ್ರತಿ ಲಗತ್ತಿಸಿದೆ)

---------

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಸರ್ಕಾರದ ಪತ್ರದಲ್ಲಿ ಸರ್ಕಾರಿ ಪಾಲಿಟೆಕ್ನಿಕ್, ಬಂಕಾಪುರ ಇದನ್ನು "ಶ್ರೀ.ಚನ್ನಕೇಶವ ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜು, ಗುಡ್ಡದ ಚನ್ನಾಪುರ" ಎಂದು ನಾಮಕರಣ ಮಾಡಲು ಸರ್ಕಾರವು ಅನುಮೋದನೆ ನೀಡಲಾಗಿದೆ. ಇದರಂತೆ ಇನ್ನು ಮುಂದೆ ತಮ್ಮ ಸಂಸ್ಥೆಯನ್ನು "ಶ್ರೀ.ಚನ್ನಕೇಶವ ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜು, ಗುಡ್ಡದ ಚನ್ನಾಪುರ, ಬಂಕಾಪುರ" ಎಂದು ಹೆಸರಿಸಬೇಕೆಂದು ಸೂಚಿಸಲಾಗಿದೆ. ಮತ್ತು ಸದರಿ ಮಾಹಿತಿಯನ್ನು ಎ.ಐ.ಸಿ.ಟಿ.ಇ ಗೆ ಅಪ್‌ಲೋಡ್ ಮಾಡಿ ಅನುಮೋದನೆ ಪಡೆಯುವುದು.

ತಮ್ಮ ವಿಶ್ವಾಸಿ

ನಿರ್ದೇಶಕರು
ತಾಂತ್ರಿಕ ಶಿಕ್ಷಣ ಇಲಾಖೆ
ಬೆಂಗಳೂರು-560001.

ಪ್ರತಿ ಇವರಿಗೆ:

1. ಮಾನ್ಯ ಉನ್ನತ ಶಿಕ್ಷಣ ಹಾಗೂ ಪ್ರವಾಸೋದ್ಯಮ ಸಚಿವರ ಆಪ್ತ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ, ಕೊಠಡಿ ಸಂಖ್ಯೆ: 314, ವಿಧಾನ ಸೌಧ, ಬೆಂಗಳೂರು 560 001 ಇವರ ಮಾಹಿತಿಗಾಗಿ
2. ಸನ್ಮಾನ್ಯ ಶ್ರೀ ಬಸವರಾಜ ಬೊಮ್ಮಾಯಿ ರವರು, ಮಾನ್ಯ ವಿಧಾನಸಭಾ ಸದಸ್ಯರು, ಶಿಗ್ಗಾಂವ ವಿಧಾನಸಭಾ ಮತಕ್ಷೇತ್ರ, ಹಾವೇರಿ ಜಿಲ್ಲೆ ಮಾಹಿತಿಗಾಗಿ
3. ಸಹ ನಿರ್ದೇಶಕರು (ಆಡಳಿತ / ಎ.ಟಿ.ಎಸ್. / ಪರೀಕ್ಷೆ / ತನಿಖೆ / ಸಿ.ಡಿ.ಸಿ.)
4. ಉಪ ನಿರ್ದೇಶಕರು, (ಯೋಜನೆ / ಪರೀಕ್ಷೆ / ಸಿಡಿಸಿ )
5. ಸಹಾಯಕ ನಿರ್ದೇಶಕರು, (ಯೋಜನೆ / ಪರೀಕ್ಷೆ / ಸಿಡಿಸಿ)
6. ಆಡಳಿತಾಧಿಕಾರಿಗಳು
7. ನಿರ್ದೇಶನಾಲಯದ ಎಲ್ಲಾ ಅಧಿಕಾರಿಗಳು ಹಾಗೂ ಸಿಬ್ಬಂದಿವರ್ಗದರಿಗೆ
8. ಡಿ. ಆಡಳಿತ ಶಾಖೆಗೆ